# ಪ್ರಗತಿಯ ಶಿಖರದತ್ತ ಚೀನಾ


**ಹಳೇಕೋಟೆ ರಮೇಶ್**

ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕೃಷಿ ಅಧ್ಯಯನ ತಂಡದ ಸದಸ್ಯರಾಗಿ ಕಳೆದ ಏಪ್ರಿಲ್-ಮೇ ತಿಂಗಳಲ್ಲಿ ಚೀನಾ ದೇಶಕ್ಕೆ ಭೇಟಿ ನೀಡಿದ ಲೇಖಕರು ಅಲ್ಲಿ ಅವರಿಗಾದ ಅನುಭವಗಳು ಮತ್ತು ಅನಿಸಿಕೆಗಳನ್ನು ಈ ಲೇಖನದಲ್ಲಿ ಚಿತ್ರಿಸಿದ್ದಾರೆ. ಚೀನಾ ದೇಶದ ಅಭಿವೃದ್ಧಿ ನಮಗೆಲ್ಲ ದಾರಿ ದೀಪವಾಗಲಿ, ಎಲ್ಲರಿಗೂ ಈ ವಿಷಯ ತಿಳಿಯಲಿ ಎಂಬುದೇ ಲೇಖಕರ ಆಶಯ.

ಭಾರತ ಮತ್ತು ಚೀನಾ ಪ್ರಪಂಚದ ಎರಡು ಬೃಹತ್ ರಾಷ್ಟ್ರಗಳು. ಭೌಗೋಳಿಕವಾಗಿ ಒಂದೇ ಖಂಡದಲ್ಲಿದ್ದು ಶತಶತಮಾನಗಳಿಂದಲೂ ಈ ಎರಡೂ ದೇಶಗಳು ಕೃಷಿ, ವಾಣಿಜ್ಯ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಪರಸ್ಪರ ಪ್ರಭಾವ ಬೀರಿರುವುದು ಇತಿಹಾಸದ ಭಾಗವಾಗಿದೆ. ಇತ್ತೀಚೆಗೆ ಕರ್ನಾಟಕದ ಕೃಷಿಕ ಸಮಾಜದ ಅಧ್ಯಯನದ ತಂಡದೊಂದಿಗೆ ಚೀನಾಕ್ಕೆ ಭೇಟಿ ನೀಡಿದಾಗ ಆ ದೇಶ ಸಾಧಿಸಿರುವ ಸರ್ವತೋಮುಖ ಅಭಿವೃದ್ಧಿ ನಮ್ಮೆಲ್ಲರನ್ನೂ ಬೆರಗುಗೊಳಿಸಿತು.

ಚೀನಾ ದೇಶವೆಂದ ಕೂಡಲೇ ನಮ್ಮ ಮನಸ್ಸಿಗೆ ಥಟ್ಟನೆ ಹೊಳೆಯುವುದು ಅತಿ ಹೆಚ್ಚು ಜನಸಂಖ್ಯೆಯಿರುವ ದೊಡ್ಡ ದೇಶ ಹಾಗೂ ವಿಶ್ವವಿಖ್ಯಾತ ಚೀನಾಗೋಡೆ. ಜನಸಂಖ್ಯೆಯ ಕಾರಣದಿಂದಾಗಿ, ನಮ್ಮ ದೇಶಕ್ಕಿಂತ ಅಧಿಕ ಭೂಮಿ ಇದ್ದರೂ ಅಲ್ಲಿನ ಕಮ್ಯುನಿಸ್ಟ್ ಪ್ರಭುತ್ವ, ಅರ್ಧಶತಮಾನಕ್ಕೂ ಮೇಲ್ಪಟ್ಟು ಆ ದೇಶವನ್ನು ಕಾಡುತ್ತಿರುವ ತೀವ್ರವಾದ ಬಡತನದೊಂದಿಗೆ ಸೆಣಸುತ್ತಲೇ ಬಂದಿದೆ. ಕಳೆದ ಶತಮಾನದ ಮಹಾ ಯುದ್ಧಗಳಿಂದ ದೇಶದ ಬಹಳಷ್ಟು ಆದಾಯವು ಸೈನ್ಯದ ನಿರ್ವಹಣೆಗೇ ಖರ್ಚಾಗುತ್ತಿದ್ದು ಅಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೆ ಆತಂಕಗಳಿದ್ದವು. ಆದರೆ ಇತ್ತೀಚೆಗೆ ಚೀನಾ ಸರ್ಕಾರವು ತನ್ನ ಆಡಳಿತದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದು ದೇಶದ ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಈ ಪ್ರಕ್ರಿಯೆ ೧೯೭೯ರಿಂದ ಈಚೆಗೆ ಪ್ರಾರಂಭವಾಯಿತು. ಸಾಮಾಜಿಕವಾಗಿ, ಚೀನಾದಲ್ಲಿ ಜಾತಿಗೆ ಪ್ರಾಮುಖ್ಯತೆ ಇಲ್ಲವಾದರೂ ಇಲ್ಲಿ ಅನೇಕ ಪಂಗಡಗಳಿವೆ. ಟಾವೊ ಮತದವರು, ಬೌದ್ಧರು, ಕ್ರೈಸ್ತರು ಹಾಗೂ ಮುಸ್ಲಿಮರ ಗುಂಪುಗಳು ಇವೆ. ಇವರೆಲ್ಲರೂ ಚೀನಾ ಭಾಷೆಯನ್ನೇ ಬಳಸುತ್ತಾರೆ. ಪ್ರಪಂಚದ ಇತರ ರಾಷ್ಟ್ರಗಳೊಡನೆ ಸಂಪರ್ಕವನ್ನು ಹೆಚ್ಚಿಸಲು ಇಂಗ್ಲಿಷ್ ಭಾಷೆಯನ್ನು ಕಲಿತು ಅದರಲ್ಲೇ ವ್ಯವಹರಿಸಲು ಚೀನಿಯರು ಇತ್ತೀಚೆಗೆ ಒಲವು ತೋರುತ್ತಿದ್ದಾರೆ.

ದಿನೇ ದಿನೇ ಬೆಳೆಯುತ್ತಿದ್ದ ಜನಸಂಖ್ಯೆಯ ನಿಯಂತ್ರಣಕ್ಕಾಗಿ ಮತ್ತು ದೇಶದ ಸಂಪತ್ತು ಪ್ರಜೆಗಳಿಗೆ ಸಮಾನ ಪ್ರಮಾಣದಲ್ಲಿ ಸಿಗುವಂತೆ ಮಾಡಲು, ಚೀನಾ ಸರ್ಕಾರವು ೧೯೭೮ರಿಂದ ಕುಟುಂಬ ವ್ಯವಸ್ಥೆಯಲ್ಲಿ ಮಹತ್ತರವಾದ ಬದಲಾವಣೆಗಳನ್ನು ತಂದಿತು. "ಒಂದು ಕುಟುಂಬಕ್ಕೆ ಒಂದೇ ಮಗು ಸಾಕು, ಮಗುವಿನ ಸಮಗ್ರ ಬೆಳವಣಿಗೆಗೆ ಕೊರತೆ ಇಲ್ಲದಂತೆ ದೇಶದ ಸಂಪತ್ತನ್ನು ಉಪಯೋಗಿಸಿ, ಒಳ್ಳೆಯ ಶಿಕ್ಷಣವನ್ನು ನೀಡಿ,



ವಿಶ್ವವಿಖ್ಯಾತ ಚೀನಾಗೋಡೆ

ಸುಶಿಕ್ಷಿತರನ್ನಾಗಿ ಮಾಡಿ, ದೇಶವನ್ನು ಪ್ರಗತಿಪಥದಲ್ಲಿ ನಡೆಸಿ" ಎಂಬ ಸರ್ಕಾರದ ಆದೇಶವನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸುತ್ತಿದ್ದಾರೆ. ಗಂಡು ಮತ್ತು ಹೆಣ್ಣಿನ ಮದುವೆಯ ವಯಸ್ಸನ್ನು ಅನುಕ್ರಮವಾಗಿ ೨೮ ಮತ್ತು ೨೫ ವರ್ಷಗಳಿಗೆ ನಿಗದಿ ಪಡಿಸಿದ್ದು, ಮದುವೆಯ ನಂತರದ ಎರಡು ವರ್ಷ ಮಕ್ಕಳನ್ನು ಪಡೆಯದೆ ಜೀವನ ಸಾಗಿಸಬೇಕು. ಚೀನಾದ ಪ್ರಜೆಗಳು ಅಭಿವೃದ್ಧಿಯನ್ನು ಸಾಧಿಸಲು ಶಿಕ್ಷಣವೇ ಮುಖ್ಯ ಅಸ್ತ್ರ ಎಂದು ನಂಬಿದ್ದಾರೆ. ಮಕ್ಕಳ ಸಂಖ್ಯೆ ನಿಯಂತ್ರಣಗೊಂಡಿದ್ದರಿಂದ ರಸ್ತೆಗಳಲ್ಲಿ ಅಥವಾ ಸಮಾರಂಭಗಳಲ್ಲಿ ಓಡಾಡುವ ಮಕ್ಕಳೇ ಇಲ್ಲವಾಗಿದೆ! ತಮ್ಮ ಬಾಳನ್ನು ಸಾಗಿಸಲು ಭೂಮಿಯೇ ಆಧಾರ ಎಂದು ನಂಬಿ, ಜನಸಂಖ್ಯೆ ಮತ್ತು ವಿಸ್ತೀರ್ಣದ ಆಧಾರದ ಮೇಲೆ ಭೂಮಿಯನ್ನು ಹಂಚಿಕೊಂಡು ಅಗತ್ಯವಾದ ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳುತ್ತಾರೆ. ಚೀನಾದಲ್ಲಿ ರೈತನಾಗಿ ಜೀವಿಸುವುದು ಪೂರ್ವಜನ್ಮದ ಪುಣ್ಯವೆಂದು ಭಾವಿಸಿ ಕೃಷಿಯಲ್ಲಿ ತೊಡಗುತ್ತಾರೆ. ಇಲ್ಲಿಯ ವಾತಾವರಣವು ಕೂಡ ಎಲ್ಲ ತರಹದ ಬೆಳೆಗಳನ್ನು ಬೆಳೆಯಲು ಅನುಕೂಲಕರವಾಗಿದ್ದು, ಮುಖ್ಯವಾಗಿ ಭತ್ತ, ಗೋಧಿ, ಜೋಳ, ರೇಷ್ಮೆ, ಹೂವುಹಣ್ಣು, ತರಕಾರಿಗಳನ್ನು ಸಮೃದ್ಧವಾಗಿ ಬೆಳೆಯುತ್ತಾರೆ. ಪೂರಕ ಬೆಳೆಗಳಾಗಿ ಇತರ ಧಾನ್ಯಗಳನ್ನು ಕೂಡ ಬೆಳೆಯುತ್ತಾರೆ. ಈ ಪಟ್ಟಿಯಲ್ಲಿ ಕಾಫಿಯೂ ಕೂಡ ಇತ್ತೀಚೆಗೆ ಸೇರಿಕೊಂಡಿದೆ. ಯಾವ

ಪ್ರದೇಶದಲ್ಲಿ ಯಾವ ಬೆಳೆ ಬೆಳೆಯಬೇಕು ಎನ್ನುವುದನ್ನು ರೈತರಿಗೆ ಸರ್ಕಾರ ಸೂಚಿಸುತ್ತದೆ. ಅನಂತರ ಸರ್ಕಾರವೇ ಉತ್ತಮ ಬೆಲೆ ನೀಡಿ ಆ ಬೆಳೆಯನ್ನು ಕೊಂಡುಕೊಳ್ಳುತ್ತದೆ.

ಸರ್ಕಾರದ ಬೆಂಬಲದೊಂದಿಗೆ ಇಲ್ಲಿನ ರೈತರು ಪಶು ಸಂಗೋಪನೆ ಹಾಗೂ ಮೀನುಗಾರಿಕೆಗೆ ಒತ್ತು ಕೊಟ್ಟಿದ್ದಾರೆ. ಅತಿ ವೃಷ್ಟಿ ಮತ್ತು ಅನಾವೃಷ್ಟಿಯ ಸಮಯಗಳಲ್ಲಿ ಸರ್ಕಾರ ಖಂಡಿತವಾಗಿಯೂ ನೆರವಿಗೆ ಬರುತ್ತದೆ. ರೈತರಿಗೆ ಬಡ್ಡಿರಹಿತ ಸಾಲವನ್ನು ಮಂಜೂರು ಮಾಡುತ್ತದೆ ಮತ್ತು ಬೇಸಾಯಗಾರನು ಬೆಳೆದ ಬೆಳೆಗಳನ್ನು ಸರ್ಕಾರಕ್ಕೆ ಮಾರುವುದು ಕಡ್ಡಾಯವಾಗಿರುತ್ತದೆ. ಈ ವ್ಯವಸ್ಥೆ ಪ್ರಗತಿಗೆ ನೆರವಾಗಿದೆ ಎಂಬುದು ಅಲ್ಲಿನ ಎಲ್ಲ ರೈತರ ಅನಿಸಿಕೆಯೂ ಆಗಿದೆ.

ಚೀನಾ ದೇಶದಲ್ಲಿನ ಹೆದ್ದಾರಿಗಳು ಅತ್ಯಂತ ಸುರಕ್ಷಿತವಾಗಿವೆ. ನಮ್ಮಲ್ಲಿಯ ಹಳ್ಳಕೊಳ್ಳದ ರಸ್ತೆಗಳಂತಿರದೆ, ಒಂದೇ ಮಾದರಿಯನ್ನು ಅನುಸರಿಸಿ ಮಾಡಿದ ರಸ್ತೆಗಳೇನೋ ಎನಿಸುತ್ತದೆ. ಒಂದು ರಸ್ತೆ ಮಾಡಬೇಕಾದರೆ ಕನಿಷ್ಠ ನಾಲ್ಕೈದು ಅಂಶಗಳನ್ನು ಗಮನಿಸಿ ಕಾರ್ಯತಂತ್ರವನ್ನು ರೂಪಿಸಲಾಗುತ್ತದೆ. ಚರಂಡಿ, ವಿದ್ಯುತ್, ನೀರುಪೂರೈಕೆ, ಪಾದಚಾರಿ ಮಾರ್ಗ, ವಾಹನ ದಟ್ಟಣೆ, ಮುಂದಿನ ಇಪ್ಪತ್ತು ವರ್ಷಗಳ ಬೆಳವಣಿಗೆ, ಹೀಗೆ ಹಲವಾರು ಅಂಶಗಳನ್ನು ಕೇಂದ್ರೀಯ ಸಮಿತಿಯು ದೃಷ್ಟಿಯಲ್ಲಿಟ್ಟುಕೊಂಡು ಯೋಜನೆಯನ್ನು ರೂಪಿಸುತ್ತದೆ. ಎಲ್ಲಿ ನೋಡಿದರಲ್ಲಿ ಒಂದೇ ರೀತಿಯ ವಿನ್ಯಾಸಗಳನ್ನು ಬಳಸಿ ಕಟ್ಟಿರುವ ಫ್ಲೈ ಓವರ್‌ಗಳನ್ನು ನೋಡಲು ಸಂತೋಷವಾಗುತ್ತದೆ. ಇಲ್ಲಿನ ವಿಶೇಷವೆಂದರೆ ಪೋಲಿಸರು ಎಲ್ಲೆಂದರಲ್ಲಿ ಕಾಣಸಿಗುವುದಿಲ್ಲ. ಎಲ್ಲೆಡೆ ವಿಡಿಯೋ ಕ್ಯಾಮರಾಗಳನ್ನು ಅಳವಡಿಸಿ ಪ್ರತಿಯೊಬ್ಬರ ಚಲನವಲನಗಳ ಮೇಲೆ ಕಂಟ್ರೋಲ್ ರೂಮ್‌ನಿಂದಲೇ ಪೋಲೀಸರ ಹದ್ದುಗಣ್ಣುಗಳು ನಿಗಾ ವಹಿಸುತ್ತಿರುತ್ತವೆ. ಪೋಲಿಸರ ನೈತಿಕ ಮಟ್ಟವೂ ಕೂಡ ನಮ್ಮವರಿಗಿಂತ ಉನ್ನತವಾಗಿದೆ. ಚೀನಾದ ಪೋಲೀಸರನ್ನು ನಮ್ಮ ಪೇದೆಗಳಿಗೆ ಹೋಲಿಸಲು ಸಾಧ್ಯವೇ ಇಲ್ಲ.

ಅಲ್ಲಿನ ಜನರು ತಿರುಗಾಟಕ್ಕೆ ಹೆಚ್ಚಾಗಿ ಸೈಕಲ್‌ಗಳನ್ನೇ ಬಳಸುತ್ತಾರೆ. ವಿಲಾಸಿ ಜೀವನದ ಹೆಚ್ಚು ಬೆಲೆಯ ಕಾರುಗಳ ಉಪಯೋಗ ಅತಿ ಕಡಮೆ ಮಟ್ಟದಲ್ಲಿದೆ. ಇದರಿಂದಾಗಿ ಇಂಧನದ ಕೊರತೆ ಮತ್ತು ವಾಯುಮಾಲಿನ್ಯದ ದುಷ್ಪರಿಣಾಮವನ್ನು ಹತೋಟಿಯಲ್ಲಿಡಲು ಸಾಧ್ಯವಾಗಿದೆ. ಎಲ್ಲರೂ ಸೈಕಲ್ ಸವಾರರಾಗಿದ್ದು, ತಮ್ಮ ಆರೋಗ್ಯವನ್ನು ಕಾಯ್ದುಕೊಂಡು ಸಪೂರವಾದ ದೇಹಾಕಾರವನ್ನು ಉಳಿಸಿಕೊಂಡಿದ್ದಾರೆ. ಆರೋಗ್ಯ, ಸ್ವಚ್ಛತೆಗೆ ಅವರು ಹೆಚ್ಚಿನ ಆದ್ಯತೆಯನ್ನು ಕೊಡುತ್ತಾರೆ. ನಮ್ಮಲ್ಲಿರುವಂತೆ ದುಡ್ಡು ಮಾಡುವ ನರ್ಸಿಂಗ್ ಹೋಂಗಳಾಗಲಿ, ಗಲ್ಲಿಗಲ್ಲಿಗೂ ಇರುವ ಕ್ಲಿನಿಕ್‌ಗಳಾಗಲೀ ಅಲ್ಲಿ ಕಂಡುಬರುವುದಿಲ್ಲ. ಪರಿಣಿತ ವೈದ್ಯರೂ ಸರ್ಕಾರಿ ಆಸ್ಪತ್ರೆಗಳಲ್ಲೇ ಜನಸೇವೆಯನ್ನು ಅತ್ಯಂತ ಶಿಸ್ತಿನಿಂದ ನಿರ್ವಹಿಸುತ್ತಾರೆ. ಚೀನಾದ ಏಳಿಗೆಗೆ ಮುಖ್ಯ ಕಾರಣವನ್ನು ನಮ್ಮ ಪ್ರಬುದ್ಧ ವಾಣಿಜ್ಯೋದ್ಯಮಿಯೊಬ್ಬರು ತಿಳಿಸಿದಂತೆ, "ಅಲ್ಲಿ ಪ್ರಭುಗಳು ಕಡಿಮೆ, ವಿಧೇಯ ಪ್ರಜೆಗಳು ಹೆಚ್ಚು; ಆದರೆ ನಮ್ಮಲ್ಲಿ ಪರಿಸ್ಥಿತಿ ತದ್ವಿರುದ್ಧ."

ಅಲ್ಲಿಯ ಬಡವರು ಶ್ರೀಮಂತರ ಆಡಂಬರಕ್ಕೆ ಬೆರಗಾಗದೆ, ಶಿಸ್ತಿಗೆ ಆದ್ಯತೆ ಕೊಟ್ಟು ಸಮಾಜದಲ್ಲಿ ತಮ್ಮದೇ ಆದ ಗೌರವದ ಸ್ಥಾನವನ್ನು ಹೊಂದಿರುತ್ತಾರೆ. ಇವೆಲ್ಲ ಸರ್ಕಾರಕ್ಕೆ ಪ್ರಜೆಗಳು ನೀಡುತ್ತಿರುವ ಸಹಕಾರ. ಇಂಥ ಪರಸ್ಪರ ಸಹಕಾರದಿಂದ ದೇಶ ಅಭಿವೃದ್ಧಿಯತ್ತ ಸಾಗುತ್ತಿದೆ.

ಚೀನಾ ದೇಶದ ವಿವಿಧ ನಗರಗಳಲ್ಲಿ ಗಗನಚುಂಬಿ ಕಟ್ಟಡಗಳ ವಿನ್ಯಾಸ ಕಣ್ಮನಗಳನ್ನು ಸೆಳೆಯುವಂತಿವೆ. ಸರ್ಕಾರವೇ ಪ್ರತಿಯೊಬ್ಬ ಪ್ರಜೆಗೂ ಬಹುಮಹಡಿ ಕಟ್ಟಡಗಳಲ್ಲಿ ನಿವಾಸಗಳನ್ನು ಒದಗಿಸಿಕೊಡುತ್ತದೆ. ಇದರಿಂದಾಗಿ ಸರ್ಕಾರ ಮತ್ತು ಪ್ರಜೆಗಳು ಅನ್ಯೋನ್ಯವಾದ ಸಂಬಂಧವನ್ನು ಹೊಂದಿದ್ದು, ಪ್ರಗತಿಯನ್ನು ಸಾಧಿಸುವ—೨೦೧೫ರ ಹೊತ್ತಿಗೆ ಜಗತ್ತಿನಲ್ಲಿಯೇ ಮೊದಲನೇ ಸ್ಥಾನದ ಅಭಿವೃದ್ಧಿಶೀಲ ರಾಷ್ಟ್ರವೆಂದು ಹೊರಹೊಮ್ಮುವ—ಗುರಿಯನ್ನು ಹೊಂದಿದ್ದಾರೆ. ಪ್ರಜೆಗಳ ಸಹಭಾಗಿತ್ವದ ಕಾರ್ಯಕ್ರಮವಾಗಿ ಚೀನಾ ದೇಶ ೨೦೦೮ರಲ್ಲಿ ಒಲಿಂಪಿಕ್ಸ್ ಕ್ರೀಡೆಗಳನ್ನು ನಡೆಸುವ ಜವಾಬ್ದಾರಿಯನ್ನು ಕೂಡ ಹೊತ್ತುಕೊಂಡಿದೆ. ಚೀನಾ ದೇಶವು ಕರ್ನಾಟಕ ರಾಜ್ಯದ ಗಣಿ ಪ್ರದೇಶಗಳ (ಹೊಸಪೇಟೆ, ಚಿತ್ರದುರ್ಗ, ದಾವಣಗೆರೆ) ಮಣ್ಣನ್ನು ತರಿಸಿ ಒಲಿಂಪಿಕ್ಸ್ ಆಟದ ಮೈದಾನವನ್ನು ಸಿದ್ಧಪಡಿಸುತ್ತಿರುವುದು ಭಾರತೀಯರಿಗೆ ಹೆಮ್ಮೆಯ ವಿಷಯ. ಚೀನಾದ ಕೌಟುಂಬಿಕ ಸಂಪ್ರದಾಯಗಳು ಹೆಚ್ಚಿನ ಮಟ್ಟಿಗೆ ಭಾರತದೇಶದ ಸಂಪ್ರದಾಯಗಳನ್ನು ಹೋಲುತ್ತವೆ. ಈಗಾಗಲೇ ಚೀನಾದೇಶದ ಐ.ಟಿ. ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗಗಳಲ್ಲಿ ನಮ್ಮವರು ಕೆಲಸ ಮಾಡುತ್ತಿದ್ದಾರೆ. ಭಾರತೀಯರನ್ನು ಅಲ್ಲಿ ಆದರದಿಂದ ಕಾಣುತ್ತಾರೆ. ಅವರನ್ನು ತುಂಬು ಹೃದಯದಿಂದ ಗೌರವಿಸುವುದನ್ನು ಕಂಡು ನನಗೆ ಬಹಳ ಸಂತೋಷವಾಯಿತು. ಈ ದೇಶದಲ್ಲಿ ಅನೇಕ ಭಾರತೀಯ ಹೋಟೆಲ್‌ಗಳೂ ಇವೆ.

ಚೀನಾದಲ್ಲಿ ಕಮ್ಯುನಿಸ್ಟ್ ಮಾದರಿಯ ಸರ್ಕಾರವಿರುವುದರಿಂದ ಇಲ್ಲಿ ವಿರೋಧ ಪಕ್ಷಗಳಿಲ್ಲ. ಬಹುತೇಕ ಎಲ್ಲ ಕಾರ್ಯಕ್ರಮಗಳು ದೇಶದ ಅಭಿವೃದ್ಧಿಯನ್ನು ಕೇಂದ್ರವಾಗಿರಿಸಿಕೊಂಡಿವೆ. ಆಡಳಿತವರ್ಗವನ್ನು ಚುನಾಯಿಸಲು ನಾಲ್ಕು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಕೈಗಾರಿಕೆ ಮತ್ತು ಯಂತ್ರೋಪಕರಣ ಕ್ಷೇತ್ರಗಳಲ್ಲಿ ಸರ್ಕಾರ ಏಕಸ್ವಾಮ್ಯತೆಯನ್ನು ಹೊಂದಿದ್ದು, ಸಾಮೂಹಿಕ ಸಗಟು ಉತ್ಪಾದನೆಯಲ್ಲಿ ತೊಡಗಿ, ವಿಶ್ವಾದ್ಯಂತ ಮಾರುಕಟ್ಟೆಗಳಲ್ಲಿ ಪೈಪೋಟಿ ನಡೆಸುತ್ತಿದೆ. ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ದೇಶವನ್ನು ಪ್ರಗತಿಪಥದತ್ತ ಸಾಗುವಂತೆ ಮಾಡಲಾಗಿದೆ. ಇದಕ್ಕೆ ಪೂರಕವಾಗಿ ೨೦೧೫ನೇ ಇಸವಿಯಲ್ಲಿ ಚೀನಾ ವಿಶ್ವ ವಿಜ್ಞಾನ ಸಮ್ಮೇಳನವನ್ನು ನಡೆಸುವ ಯೋಜನೆಯನ್ನು ಹಾಕಿಕೊಂಡಿದೆ.

ಪ್ರಪಂಚದ ಎಲ್ಲ ದೇಶಗಳಲ್ಲಿ ಚೀನಾದ ವಸ್ತುಗಳು ದೊರೆಯುತ್ತವೆ ಮತ್ತು ಅವುಗಳಿಗೆ ಅಪಾರವಾದ ಬೇಡಿಕೆಯೂ ಇದೆ. ಏಕೆಂದರೆ ಇಲ್ಲಿ ತಯಾರಾದ ವಸ್ತುಗಳು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು, ಕಡಿಮೆ ದರದಲ್ಲಿ ದೊರೆಯುತ್ತವೆ. ದೇಶಾಭಿಮಾನ, ಸಮಯಪ್ರಜ್ಞೆ, ಮುಂದುವರಿಯಬೇಕೆಂಬ ಛಲ, ಶ್ರಮ ಇವು ಚೀನಾ ದೇಶದ ಅಭಿವೃದ್ಧಿಗೆ ಸಹಕಾರಿಯಾಗಿವೆ. ದಕ್ಷ ಆಡಳಿತ, ನಿಷ್ಠಾವಂತ ಅಧಿಕಾರಿಗಳು ಹಾಗೂ ಪ್ರಾಮಾಣಿಕ ಪ್ರಜೆಗಳು ಆ ದೇಶದ ಮಾನವ ಸಂಪತ್ತನ್ನು ಸಮೃದ್ಧಗೊಳಿಸಿದ್ದಾರೆ. ಭ್ರಷ್ಟಾಚಾರರಹಿತ ದೇಶವಾದ್ದರಿಂದ ಹೀಗೆ ಪ್ರಗತಿಯ ಶಿಖರಕ್ಕೆ ಏರಲು ಅದಕ್ಕೆ ಸಾಧ್ಯವಾಗಿದೆ.

ಇತ್ತೀಚೆಗೆ ಚೀನಾ ದೇಶದಲ್ಲಿ ಏಲಕ್ಕಿ ಹಾಗೂ ಕಾಫಿಯನ್ನು ಕೂಡ ಬೆಳೆಯುತ್ತಿದ್ದಾರೆ. ಅಲ್ಲಿನ ಹವಾಗುಣ ಹಾಗೂ ಭೌಗೋಳಿಕ ಅಂಶಗಳು ಕಾಫಿಯನ್ನು ಬೆಳೆಯಲು ಅನುಕೂಲಕರವಾಗಿವೆ ಎಂದು ತಿಳಿದುಬಂದಿದೆ. ಚೀನಾ ದೇಶದ ರಾಜಧಾನಿಯಾದ ಬೀಜಿಂಗ್ ಪಟ್ಟಣದ ಸುತ್ತಮುತ್ತ ಸಣ್ಣ ಪ್ರಮಾಣದಲ್ಲಿ ಕಾಫಿಯನ್ನು ಬೆಳೆಯುತ್ತಿದ್ದಾರಾದರೂ, ದಕ್ಷಿಣ ಪ್ರಾಂತ್ಯದ ಯುನಾನ್ ಎಂಬಲ್ಲಿ ಅರೇಬಿಕಾ ಮತ್ತು ರೋಬಸ್ಟಾ ಕಾಫಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಇತರ ಪ್ರದೇಶಗಳಲ್ಲಿ ಅರೇಬಿಕಾ ಕಾಫಿ ಪ್ರಮಾಣವು ಹೆಚ್ಚಾಗಿದ್ದು, ವಿಯೆಟ್ನಾಮಿನ ಕರಾವಳಿ ಪ್ರದೇಶದಲ್ಲಿ ರೋಬಸ್ಟಾ ಕಾಫಿಯನ್ನು ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿದ್ದಾರೆ. ಈ ವರ್ಷ ಚೀನಾ ದೇಶದಲ್ಲಿ ೮,೦೦೦ ಟನ್ ಕಾಫಿಯನ್ನು ಬೆಳೆದಿದ್ದಾರೆ. ಇತ್ತೀಚೆಗೆ ಇಲ್ಲಿಯೂ ಕಾಫಿ ಕುಡಿಯುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಅರೇಬಿಕಾ ಕಾಫಿಗೆ ಹೆಚ್ಚಿನ ಬೇಡಿಕೆ ಇದೆ. ಸದ್ಯದ ಪರಿಸ್ಥಿತಿಯಲ್ಲಿ ಚೀನಾ ಕಾಫಿಯ ಗುಣಮಟ್ಟ ಸಾಧಾರಣವಾಗಿದ್ದು ತನ್ನ ಎಲ್ಲ ಉತ್ಪನ್ನವನ್ನು ತಾನೇ ಉಪಯೋಗಿಸಿಕೊಳ್ಳುತ್ತಿದೆ. ಬೇಡಿಕೆ ಹೆಚ್ಚಿರುವುದರಿಂದ ರೈತರು ಸಾವಯವ ಕೃಷಿಯ ಮೂಲಕ ಕಾಫಿ ಮತ್ತು ಚಹಾ ಬೆಳೆಯುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಾರೆ. ಕೃಷಿಯ ಕುರಿತಂತೆ ಅವರ ಜಾಣ್ಮೆ ಮತ್ತು ನೈಪುಣ್ಯತೆಗಳಿಂದ ಮುಂಬರುವ ವರ್ಷಗಳಲ್ಲಿ ಒಳ್ಳೆಯ ಗುಣಮಟ್ಟದ ಕಾಫಿಯನ್ನು ಬೆಳೆದು ನಮ್ಮ ಉತ್ಪಾದನೆಗಳೊಂದಿಗೆ ಸ್ಪರ್ಧೆಗೆ ಇಳಿಯುವುದರಲ್ಲಿ ಸಂದೇಹವಿಲ್ಲ.

ಚೀನಾ ದೇಶದ ಕಾಫಿ ಬೆಳೆಗಾರರ ಪೈಪೋಟಿ ಭಾರತಕ್ಕೆ ಒಂದು ಪಾಠವಾಗಿ ಪರಿಣಮಿಸಿದೆ ಎಂದರೂ ತಪ್ಪಾಗಲಾರದು. ಇಲ್ಲಿನ ಕೃಷಿಕ್ಷೇತ್ರವು ಸೋಜಿಗವೆಂಬಂತೆ ಬೆಳೆಯುತ್ತಿದ್ದು ದೇಶದ ವರಮಾನವನ್ನು ಹೆಚ್ಚಿಸಿದೆ. ಚೀನಾದ ಒಂದು ಯುವಾನ್ ಭಾರತದ ಆರು ರೂಪಾಯಿಗಳಿಗೆ ಸಮ. ಕೃಷಿಕ್ಷೇತ್ರದ ಹಲವಾರು ಉಪಯುಕ್ತ ವೈಜ್ಞಾನಿಕ ಪದ್ಧತಿಗಳನ್ನು ಅವರಿಂದ ಕಲಿತುಕೊಂಡೆವು. ಅವುಗಳನ್ನು ಬಳಸಿದರೆ ನಮ್ಮ ಕೃಷಿ ಚಟುವಟಿಕೆಗಳೂ ಲಾಭದಾಯಕವಾಗುವುದರಲ್ಲಿ ಸಂದೇಹವಿಲ್ಲ. ಒಟ್ಟಾರೆಯಾಗಿ ಆ ದೇಶದ ರೈತರ ಶಿಸ್ತು, ಆಚಾರ-ವಿಚಾರಗಳು, ಅವರು ಬಳಸುವ ಆಧುನಿಕ ಪದ್ಧತಿಗಳು, ಅವರ ದೇಶಭಕ್ತಿ, ಸಹಕಾರ, ಸರ್ಕಾರದ ನೆರವು, ಮಾರುಕಟ್ಟೆ, ನೀರಾವರಿ, ವಿದ್ಯುಚ್ಛಕ್ತಿ, ಇಂಧನ ವ್ಯವಸ್ಥೆಗಳೆಲ್ಲ ಅಭಿವೃದ್ಧಿಗೆ ಪೂರಕಗಳಾಗಿದ್ದು, ಅವರು ನಮ್ಮ ದೇಶಕ್ಕಿಂತ ಎರಡು ಪಟ್ಟು ಪ್ರಗತಿಯತ್ತ ನಡೆಯುತ್ತಿದ್ದುದು ಕಂಡುಬಂದಿತು.

ಚೀನಾದಲ್ಲಿ ಶಿಕ್ಷಣ ಕಡ್ಡಾಯವಾಗಿದೆ. ೬ನೇ ವಯಸ್ಸಿನಿಂದ ೧೦ನೇ ವಯಸ್ಸಿನವರೆಗೆ ಪ್ರೈಮರಿ ಸ್ಕೂಲ್, ೧೦-೧೩ ರವರೆಗೆ ಜೂನಿಯರ್ ಸ್ಕೂಲ್, ೧೩-೧೮ ರವರೆಗೆ ಹೈಯರ್ ಸೆಕಂಡರಿ ಸ್ಕೂಲ್, ನಂತರ ೪ ವರ್ಷ ಪದವಿ ಶಿಕ್ಷಣ, ಪದವಿಯ ನಂತರ ವೈದ್ಯಕೀಯ, ದಂತವೈದ್ಯಕೀಯ, ಇಂಜಿನಿಯರಿಂಗ್, ಕೃಷಿಗೆ ಸಂಬಂಧಿಸಿದ ಶಾಲೆಗಳಿಗೆ ವಿದ್ಯಾರ್ಥಿಗಳು ಉನ್ನತ ವ್ಯಾಸಂಗಕ್ಕಾಗಿ ಸೇರುತ್ತಾರೆ. ಶಿಕ್ಷಣ ಮಾಧ್ಯಮ ಮತ್ತು ಆಡಳಿತ ಮಾಧ್ಯಮ ಚೀನಾ ಭಾಷೆ. ಇತ್ತೀಚೆಗೆ ಇಂಗ್ಲಿಷ್ ಭಾಷೆಯನ್ನು ಶಿಕ್ಷಣ ಕ್ಷೇತ್ರದಲ್ಲಿ ಬಳಸಲು ಆರಂಭಿಸಿದ್ದಾರೆ. ಇಂಗ್ಲಿಷ್ ಭಾಷೆ ಕಲಿಯುವ ಸಲುವಾಗಿ ಚೀನಿಯರು ಭಾರತ ಮತ್ತು ಯುರೋಪ್ ದೇಶಗಳಿಗೆ ಹೋಗುತ್ತಿದ್ದಾರೆ.

ಚೀನಾದಲ್ಲಿ ಅಣುಸ್ಥಾವರದಿಂದ ದೇಶಾದ್ಯಂತ ವಿದ್ಯುಚ್ಛಕ್ತಿಯನ್ನು ಪಡೆಯುತ್ತಿದ್ದಾರೆ. ದೇಶದ ಎಲ್ಲೆಡೆ ಕೃಷಿಗೆ ಮತ್ತು ಕುಡಿಯುವುದಕ್ಕೆ ಬೇಕಾದ ಒಳ್ಳೆಯ ನೀರಿನ ವ್ಯವಸ್ಥೆ ಇದೆ. ನೀರನ್ನು ಚೀನಿಯರು ಮಿತವಾಗಿ ಬಳಸುತ್ತಾರೆ. ನೀರಿನ ದುರ್ಬಳಕೆಯ ವಿರುದ್ಧದ ಕಾಯಿದೆ ಅಲ್ಲಿ ಜಾರಿಯಲ್ಲಿದೆ. ಸಮುದ್ರಕ್ಕೆ ಸೇರುವ ನದಿಗಳನ್ನು ತಿರುಗಿಸಿ, ಸಂಗ್ರಹಿಸಿ, ಕೃಷಿ ಮತ್ತು ಕುಡಿಯುವ ನೀರಿಗಾಗಿ ಬಳಸುತ್ತಿದ್ದಾರೆ.

ಚೀನಾದಿಂದ ನಾವು ಕಲಿಯಬೇಕಾದ ಅಂಶಗಳು ಬಹಳಷ್ಟಿವೆ. ಈ ಮೇಲಿನ ಎಲ್ಲ ಅಂಶಗಳಿಂದ ಚೀನಾ ದೇಶವು ಪ್ರಗತಿಯ ಶಿಖರದತ್ತ ಮುನ್ನುಗ್ಗುತ್ತಿದೆ ಎಂದರೆ ಅತಿಶಯೋಕ್ತಿ ಆಗಲಾರದು. ನನ್ನಲ್ಲಿ ಮತ್ತೆ ಮತ್ತೆ ಮೂಡುತ್ತಿದ್ದ ಆಲೋಚನೆಯೆಂದರೆ ಚೀನಾದಂತೆ ನಮ್ಮಲ್ಲಿಯೂ ಏಕೆ ಅಭಿವೃದ್ಧಿ ಆಗುತ್ತಿಲ್ಲ? ನಮಗೂ ಸಾಮರ್ಥ್ಯವಿದೆ. ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವದಲ್ಲಿ ದಕ್ಷ ಅಧಿಕಾರಿಗಳಿಗೆ, ಉತ್ಕೃಷ್ಟ ನೀತಿ ನಿಯಮಾವಳಿಗೇನೂ ಕೊರತೆ ಇಲ್ಲ. ನಾವೆಲ್ಲರೂ ದೃಢ ಸಂಕಲ್ಪ ಮಾಡಬೇಕಷ್ಟೆ.

ಚೀನಾ ಮತ್ತು ಭಾರತಗಳಲ್ಲಿ ಜಗತ್ತಿನ ಮೂರನೇ ಒಂದು ಭಾಗದ ಜನಸಂಖ್ಯೆ ಇದೆ. ಇವೆರಡೂ ಜಗತ್ತಿನ ಪ್ರಾಚೀನ ಸಂಸ್ಕೃತಿಯ ಪ್ರತಿನಿಧಿಗಳು. ಯಾವುದೇ ರೀತಿಯ ಸ್ಪರ್ಧೆ ಅಥವಾ ಸಂಘರ್ಷಕ್ಕೆ ಅವಕಾಶವನ್ನೀಯದೆ ಪರಸ್ಪರ ಸಹಕಾರ ಮತ್ತು ಅರಿವಿನ ಹಾದಿಯನ್ನು ಅವಲಂಬಿಸಿದ್ದೇ ಆದರೆ ಇಂದಿನ ಪಾಶ್ಚಾತ್ಯ ಮಾದರಿಯ ನಾಯಕತ್ವವನ್ನು ನೆಚ್ಚಿರುವ ನಮ್ಮ ಜಗತ್ತಿಗೆ ಪೌರ್ವಾತ್ಯ ಸಂಸ್ಕೃತಿಯಾಧಾರಿತ ನಾಯಕತ್ವವನ್ನು ಪರಿಚಯಿಸಲು ಸಾಧ್ಯ.